ಸರ್ಕಾರದಿಂದ ರೈತರ ಉತ್ಪನ್ನ ಖರೀದಿ.

1695(2178)

ಶ್ರೀ ಪಾಟೀಲ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರದಿಂದ ರೈತರ ಉತ್ಪನ್ನ ಖರೀದಿಸಿರುವುದೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಖರೀದಿ ಮಾಡಿದ ಮಾಲಿನ ಒಟ್ಟು ಬೆಲೆ ಎಷ್ಟು? ಮತ್ತು ರೈತರಿಗೆ ಬಿಡುಗಡೆ ಮಾಡಿದ ಹಣವೆಷ್ಟು? ರೈತರಿಗೆ ಹಣ ತಲುಪಿದ ದಿನಾಂಕ ಹಾಗೂ ತಾಲ್ಲೂಕುವಾರು ವಿವರ ನೀಡುವುದು.

ಇ) ರೈತ ವಿವಿಧ ಸಂಸ್ಥೆಗಳಿಂದ ಮಾಡಿದ ಸಾಲದ ಮೇಲೆ ಬಡ್ಡಿ ತುಂಬಬೇಕಾಗಿದ್ದು, ಸರ್ಕಾರ ಮಾಡಿದ ವಿಳಂಬದಿಂದ ರೈತನಿಗೆ ಆದ ಹಾನಿಯನ್ನು ಸರ್ಕಾರ ತುಂಬಿಕೊಡುತ್ತದೆಯೆ?

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು):

ಅ) ರಾಜ್ಯಾದ್ಯಂತ ಕಡಿಮೆ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗಿರುವ ಭತ್ತ ಹಾಗೂ ಒರಟು ಧಾನ್ಯಗಳ ವಿವರ ಕೆಳಕಂಡಂತಿದೆ:

I. ಭತ್ತ		(ಕ್ವಿಂ.ಗಳಲ್ಲಿ)
1)	ರಾಯಚೂರು	2130
2)	ಮಾನ್ವಿ	3715
3)	ಸಿಂಧನೂರು	3601
4)	ಗಂಗಾವತಿ	1117
5)	ಶಿಕಾರಿಪುರ	225
6)	ತೀರ್ಥಹಳ್ಳಿ	501

7)	ಕುಶಾಲನಗರ	291
	ಒಟ್ಟು	11580

II ಸಜ್ಜೆ

1)	ದೇವದುರ್ಗ	2295.20
2)	ಲಿಂಗಸುಗೂರು	12834.00
3)	ಕುಷ್ಟಗಿ	5069.20
4)	ಕುಕ್ಕನೂರು	449.00
5)	ಮುದ್ದೆಬಿಹಾಳ	24290.00
6)	ಬಿಜಾಪುರ	209.00
	ಒಟ್ಟು	45146.90

III ರಾಗಿ:

1)	ಹೊಸದುರ್ಗ	18187.75
2)	ಕಡೂರು	18248.00
3)	ಕುಣಿಗಲ್	10507.00
4)	ಚಿಕ್ಕನಾಯಕನಹಳ್ಳಿ	5759.41
5)	ತಿಪಟೂರು	11705.33
6)	ತುರುವೇಕೆರೆ	2558.75
7)	ಅರಸೀಕೆರೆ	31308.75

8)	ಗಂಡಸಿ	20467.25
9)	ಚನ್ನರಾಯಪಟ್ಟಣ	11010.50
10)	ಗುಬ್ಬಿ	4551.02
11)	ಹುಳಿಯಾರ್	5165.28
12)	ಹಾಸನ	11105.00
13)	ತರೀಕೆರೆ	2817.09
14)	ಮಂಡ್ಯ	739.00
	ಒಟ್ಟು	154130.13

I ಮೆಕ್ಕೆಜೋಳ (ಮೆಟ್ರಿಕ್ ಟನ್‌ಗಳಲ್ಲಿ)

ದಾವಣಗೆರೆ

1)	ದಾವಣಗೆರೆ	24810.870
2)	ಹೊನ್ನಾಳಿ	30729.836
3)	ಚನ್ನಗಿರಿ	10655.045
4)	ಹರಪನಹಳ್ಳಿ	11598.455
5)	ಜಗಳೂರು	7677.955

ಚಿತ್ರದುರ್ಗ

6)	ಚಿತ್ರದುರ್ಗ	29606.645
7)	ಹೊಳಲ್ಕೆರೆ (ಚಿಕ್ಕಜಾಜೂರು)	4604.016
8)	ಚಳ್ಳಕೆರೆ	6526.000

	ಧಾರವಾಡ	
9)	ಧಾರವಾಡ	13030.961
10)	ತನಿಹಾಲ್	4495.042
11)	ಸಟ್ಟೂರು	10433.280
12)	ನವಲಗುಂದ	1181.325
13)	ಹುಬ್ಬಳ್ಳಿ ಗೋಕುಲ ರಸ್ತೆ	19461.295
14)	ಅಸಗವಾಡಿ	326.230
15)	ಅಣ್ಣಿಗೇರಿ	3714.705
	ಹಾವೇರಿ	
16)	ಹಾವೇರಿ	13399.674
17)	ರಾಣೆಬೆನ್ನೂರು	10346.925
18)	ಹಿರೇಕೆರೂರು(ಟಿಎಪಿಸಿಎಂಎಸ್)	6560.510
19)	ಬ್ಯಾಡಗಿ (ಟಿಎಪಿಸಿಎಂಎಸ್)	3567.440
20)	ಬ್ಯಾಡಗಿ	3926.000
21)	ಹಿರೇಕೆರೂರು	7790.000
	ಗದಗ್	
22)	ಗದಗ್	26008.055
23)	ನರಗುಂದ	1228.840
24)	ನರಗುಂದ (ಟಿಎಪಿಸಿಎಂಎಸ್)	5958.685
25)	ರೋಣ	2468.290

	ಬಾಗಲಕೋಟೆ	
26)	ಬಾಗಲಕೋಟೆ	3423.895
27)	ಮುಧೋಳ	1508.505
28)	ಬಾದಾಮಿ	5454.045
29)	ಜಮಖಂಡಿ	761.900
	ಬಳ್ಳಾರಿ	
30)	ಸಂಡೂರು	538,000
31)	ಬಳ್ಳಾರಿ	3930.000
32)	ಹಡಗಲಿ(ಹೂಳಲು)	905.700
33)	ಬಳ್ಳಾರಿ	12805.000
34)	ಹಗರಿಬೊಮ್ಮನಹಳ್ಳಿ	2700.000
35)	ಹಡಗಲಿ	7548.000
	ತುಮಕೂರು	
36)	ಮಧುಗಿರಿ	154.900
	ಕೋಲಾರ	
37)	ಗೌರಿಬಿದನೂರು	65.700
38)	ಗೌರಿಬಿದನೂರು	4860.000
	ಶಿವಮೊಗ್ಗ	
39)	ಶಿವಮೊಗ್ಗ	2410.000
40)	ಶಿವಮೊಗ್ಗ	26249.000

41)	ಶಿಕಾರಿಪುರ	45224.000
	ಕೊಪ್ಪಳ	
42)	ಕೊಪ್ಪಳ	4375.000
43)	ಕುಷ್ಟಗಿ	1243.000
	ಹಾಸನ	
44)	ಹಾಸನ	1503.000
45)	ಅರಸೀಕೆರೆ	1749.000
	ಮೈಸೂರು	
46)	ಪಿರಿಯಪಟ್ಟಣ	3381.000
	ಕೊಡಗು	
47)	ಕುಶಾಲನಗರ	2614.000
	ಬೆಳಗಾಂ	
48)	ಸವದತ್ತಿ	8566.000
49)	ರಾಮದುರ್ಗ	5093.000
50)	ಗೋಕಾಕ	1583.000
51)	ಹಂಚಿನಾಳ	1642.000
52)	ಬೈಲಹೊಂಗಲ	1043.000
	ಬಿಜಾಪುರ	
53)	ಬಿಜಾಪುರ	1180.000
	ಒಟ್ಟು	382621.024

ಕ)

ಧಾನ್ಯ	ಮಾಲಿನ ಬೆಲೆ (ರೂ.ಲಕ್ಷಗಳಲ್ಲಿ)	ರೈತರಿಗೆ ಪಾವತಿಸಿರುವ ಹಣ (ಲಕ್ಷ ರೂ.ಗಳಲ್ಲಿ)
ಭತ್ತ	59:06	59.06
ರಾಗಿ	700.46	694.46
ಸಜ್ಜೆ	200.90	200.90
ಮೆಕ್ಕೆಜೋಳ	-	-
ಕಆನಾಸನಿನಿ	11615.05	9529.20
ಭಾ.ಆ.ನಿ.	5411.38	ವಿವರಗಳನ್ನು ಒದಗಿಸಿರುವುದಿಲ್ಲ

ರೈತರಿಗೆ ಹಣ ತಲುಪಿದ ದಿನಾಂಕ ಹಾಗೂ ತಾಲ್ಲೂಕುವಾರು ವಿವರಗಳು ಸದ್ಯದಲ್ಲಿ ಲಭ್ಯವಿರುವುದಿಲ್ಲ. ಸದರಿ ವಿವರಗಳನ್ನು ಜಿಲ್ಲಾ ಕಛೇರಿಗಳಿಂದ ತರಿಸಿಕೊಂಡು ಒದಗಿಸಲಾಗುವುದು.

ಇ) ಕೇಂದ್ರ ಸರ್ಕಾರದಿಂದ : ಭಾರತ ಆಹಾರ ನಿಗಮದಿಂದ ಹಣ ನೀಡಲು ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ವತಿಯಿಂದ ಈಗಾಗಲೇ ರೂ.59.00 ಕೋಟಿಯನ್ನು ಆವರ್ತ ನಿಧಿಯಿಂದ ಬಿಡುಗಡೆ ಮಾಡಿದ್ದು, ಸದರಿ ಹಣವನ್ನು ರೈತರಿಗೆ ಈಗಾಗಲೇ ಪಾವತಿಸಿದ್ದು, ಸರ್ಕಾರದ ವತಿಯಿಂದ ಹಣ ನೀಡುವಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ. ಈ ಕಾರಣ ರೈತನಿಗೆ ಆಗಿರುವ ಹಾನಿಯನ್ನು ತುಂಬಿಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತರ ಕುರಿತು.

1696(2179)

ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತರ ಎಷ್ಟು ಜನ